ದಿನಾಂಕಃ 07.11.2024
ಅಸಲು ದಾವೆಃ 97/2020
ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಜೆ. ರವರಿಂದಃ

ನಿಮಗೆ ಪುನೀತ್ ರವರ ಮೇಲೆ ಪ್ರೀತಿ ವಿಶ್ವಾಸ ಅಕ್ಕರೆ ಇದಿದ್ದರೆ ಅವರು ಹಗಲು ರಾತ್ರಿ ಕುಡಿಯುತ್ತಿದುದನ್ನು ನಿಲ್ಲಿಸಬಹುದಿತ್ತು ಎಂದರೆ ಸಾಕ್ಷಿ ಅವರು ಹಗಲು ರಾತ್ರಿ ಕುಡಿಯುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನೀವು ಮತ್ತು ನಿಮ್ಮ ತಂದೆ ಪುನೀತ್ ರವರಿಗೆ ಕೊಡುತ್ತಿದ್ದ ಮಾನಸಿಕ ಕಿರುಕುಳದಿಂದಾಗಿ ಪುನೀತ್ ರವರು ಹಗಲು ರಾತ್ರಿ ಕುಡಿದು ಎಲ್ಲಿ ಬೇಕೋ ಅಲ್ಲಿ ಬೀಳುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನೀತ್ ರವರು ಕುಡಿಯುತ್ತಿದ್ದರಾ ಅಥವಾ ಇಲ್ಲವಾ ಎಂದರೆ ಸಾಕ್ಷಿ ಅಪರೂಪಕ್ಕೆ ಸ್ನೇಹಿತರ ಜೊತೆ ಕುಡಿಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಪುನೀತ್ ರವರು ನಿಮ್ಮ ಜೊತೆ ವಿವಾಹವಾದ ನಂತರವೂ ಕುಡಿಯಲು ಕಾರಣವೇನು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ಮದುವೆಗೂ ಮುಂಚಿನಿಂದಲೂ ಕುಡಿಯುತ್ತಿದ್ದರು ಮದುವೆಯ ನಂತರವೇನು ಕುಡಿಯಲು ಪ್ರಾರಂಭಿಸಿದ್ದಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮದುವೆಗೂ ಮುಂಚೆ ಪುನೀತ್ ರವರು ಕುಡಿಯುತ್ತಿರಲಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಒಂದು ವೇಳೆ ಪುನೀತ್ ರವರು ಮದುವೆಗೂ ಮುಂಚೆ ಮಧ್ಯವ್ಯಸನಿ ಆಗಿದ್ದರೆ ನೀವು ಅವರನ್ನು ಮದುವೆಯೇ ಆಗುತ್ತಿರಲಿಲ್ಲ, ಅವರ ಆಸ್ತಿ ನೋಡಿ ನೀವು ಪ್ರೀತಿಯ ನಾಟಕವಾಡಿ ಮದುವೆಯಾಗಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಮದುವೆಯಾದ ನಂತರ ನೀವು ಪ್ರತಿ ದಿನ ಹಣಕ್ಕಾಗಿ ಪುನೀತ್ ರವರನ್ನು ಪೀಡಿಸುತ್ತಿದ್ದೀರಿ ಮತ್ತು ಜಗಳವಾಡುತ್ತಿದ್ದೀರಿ ಈ ವಿಚಾರ ಅಕ್ಕಪಕ್ಕದ ಮನೆಯವರೆಲ್ಲರಿಗೂ ಗೊತ್ತು ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಪುನೀತ್ ರವರಿಗೆ ಬೈಯುತ್ತಿದುದ್ದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿ ಅವರು ಕುಡಿತದ ಚಟಕ್ಕೆ ಬಲಿಯಾದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನಮ್ಮ ಮಗುವಿಗೆ 7 ತಿಂಗಳು ಇದ್ದಾಗ ಪುನೀತ್ ರವರು ಜ್ವರ ಎಂದು ಅಡ್ಮಿಟ್ ಆಗಿದ್ದರು. ನಿಮ್ಮ ಗಂಡನಿಗೆ ಅನಾರೋಗ್ಯವಿದ್ದರು ನೀವಾಗಲಿ ನಿಮ್ಮ ತಂದೆಯ ಕುಟುಂಬದವರಾಗಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿಲ್ಲ ಎಂದರೆ ಸಾಕ್ಷಿ ನಾನು 7 ತಿಂಗಳ ಬಾಣಂತಿ ಇರುವಾಗ ನನ್ನ ಗಂಡನೇ ನನಗೆ ಫೋನ್ ಮಾಡಿ ಹುಷಾರಿಲ್ಲ ಜ್ವರ ಇದೆ ಆಸ್ಪತ್ರೆಗೆ ತೋರಿಸಲು ಹೋಗುತ್ತಿದ್ದೇನೆ ಎಂದು ಹೇಳಿ ಹೋಗಿದ್ದರು ಎಂದು ಉತ್ತರಿಸುತ್ತಾರೆ. ಪುನೀತ್ ರವರು ಜೂನ್ 2016 ನೇ ಇಸವಿಯಿಂದ ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದರು ಎಂದರೆ ಸಾಕ್ಷಿ ನನಗೆ ನೆನಪಿರುವ ಪ್ರಕಾರ ನಮ್ಮ ಮಗುವಿಗೆ 7 ತಿಂಗಳು ಇರುವಾಗ ಪುನೀತ್ ರವರಿಗೆ ಜ್ವರ ಬಂದಿದ್ದು ನಂತರ ನಮ್ಮ ಮಗುವಿಗೆ 9 ತಿಂಗಳು ಆದಾಗ ಅವರಿಗೆ ಸ್ವಲ್ಪ ಜೋರಾಗಿ ಹುಷಾರು ತಪ್ಪಿತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡ ತೀವ್ರವಾಗಿ ಅನಾರೋಗ್ಯಕ್ಕೆ ಒಳಗಾದಾಗ 2 ನೇ ಪ್ರತಿವಾದಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು ಎಂದರೆ ಸಾಕ್ಷಿ ಇಲ್ಲ ನಾನು ನನ್ನ 9 ತಿಂಗಳ ಮಗುವನ್ನು ಮನೆಯಲ್ಲಿ ಬಿಟ್ಟು ಅವರನ್ನು ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆನು ಎಂದು ಉತ್ತರಿಸುತ್ತಾರೆ. ಜೂನ್ 2016 ರಿಂದ ಫೆಬ್ರವರಿ 2019 ರವರೆಗೆ ಪುನೀತ್ ರವರನ್ನು ಯಾವುದೇ ಸರ್ಕಾರಿ ಆಸ್ಪತ್ರೆಗೆ ದಾಖಲಿಸದೆ ಖಾಸಗಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಡಿಸಿರುವುದು ಎಂದರೆ ಸಾಕ್ಷಿ ಹೌದು ನಾನೇ ಅವರನ್ನು ಪ್ರತಿ ಸಾರಿ ಅಡ್ಮಿಟ್ ಮತ್ತು ಡಿಸ್ಚಾರ್ಜ್ ಮಾಡಿಸಿದಾಗ ದಾಖಲಾತಿಗಳಿಗೆ ಸಹಿ ಹಾಕಿರುವುದು ಎಂದು ಉತ್ತರಿಸುತ್ತಾರೆ. ನೀವು ಮೇಲೆ ಹೇಳಿದ ರೀತಿ ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ ಅಡ್ಮಿಟ್ ಮತ್ತು ಡಿಸ್ಚಾರ್ಜ್ ಮಾಡಿಸಿದಾಗ ದಾಖಲಾತಿಗಳಿಗೆ ಸಹಿ ಹಾಕಿರುವುದಿಲ್ಲ, ಸುಳ್ಳು ಹೇಳುತ್ತಿದ್ದೀರಿ, ಪುನೀತ್ ರವರು ತೀವ್ರವಾಗಿ ಅನಾರೋಗ್ಯಕೆ ಒಳಗಾದ ನಂತರ ನೀವು ಅವರನ್ನು ಯಾವ ಕಾಲಕ್ಕೂ ನೋಡಿಕೊಂಡಿರುವುದಿಲ್ಲ, ಅವರು ತೀರಿಕೊಂಡ ನಂತರವೇ ಬಂದು ನೋಡಿದ್ದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನೀತ್ ರವರನ್ನು ಯಾವ ಯಾವ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಎಷ್ಟು ಸಾರಿ ದಾಖಲಿಸಿದ್ದೀರಿ ಎಂದು ಹೇಳಬಹುದಾ ಎಂದರೆ ಸಾಕ್ಷಿ ತುಂಬಾ ಸಾರಿ ಅಡ್ಮಿಟ್ ಮಾಡಿದ್ದೇವೆ ಮೈಸೂರಿನ ಅಪೊಲೋ ಬಿ.ಜಿ.ಎಸ್., ಜೆ.ಎಸ್.ಎಸ್ ಆಸ್ಪತ್ರೆ ಮತ್ತು ಬೆಂಗಳೂರಿನ ಬಿ.ಜಿ.ಎಸ್ ಆಸ್ಪತ್ರೆಯಲ್ಲಿ ದಾಖಲಿಸಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ಗಂಡನಿಗೆ ಈ ಮೇಲೆ ಹೇಳಿದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿರುವುದಾಗಿ ಹೇಳಿರುವ ಬಗ್ಗೆ ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿ ನಾನು ಆ ದಾಖಲಾತಿಗಳನ್ನು ಇಟ್ಟುಕೊಂಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿಯವರೇ ಪುನೀತ್ ರವರಿಗೆ ಬಹುಳಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿರುವುದರಿಂದ ಆ ಬಗ್ಗೆ ಅವರಿಗೆ ಮಾತ್ರ ಗೊತ್ತಿದೆ, ನೀವು ಕಿವಿಯಲ್ಲಿ ಕೇಳಿಸಿಕೊಂಡ 2 ಆಸ್ಪತ್ರೆಗಳ ಹೆಸರನ್ನು ಮಾತ್ರ ಹೇಳುತ್ತಿದ್ದೀರಿ,

ಹಾಗಾಗಿಯೇ ನಿಮ್ಮ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸಾಕ್ಷಿ ಸರಿಯಲ್ಲ ನಾನು ಯಾರಿಗೂ ಲೆಕ್ಕ ಕೊಡಬೇಕಾಗಿರಲಿಲ್ಲ ಎಂದು ಉತ್ತರಿಸುತ್ತಾರೆ.

ಪುನೀತ್ ರವರ ಅನಾರೋಗ್ಯದ ನಿಮಿತ್ತ ಚಿಕಿತ್ಸೆಗಾಗಿ ಪ್ರತಿವಾದಿಯರು ಎಷ್ಟು ಖರ್ಚು ಮಾಡಿದ್ದಾರೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಪುನೀತ್ ರವರ ಖಾಯಿಲೆಯ ಪ್ರಾರಂಭದ ದಿನಗಳಿಂದ ಅವರು ತೀರಿಕೊಳ್ಳುವವರೆಗೂ ಯಾವ ಯಾವ ಆಸ್ಪತ್ರೆಯಲ್ಲಿ ಎಷ್ಟು ಎಷ್ಟು ಖರ್ಚು ಮಾಡಿ ಚಿಕಿತ್ಸೆ ಕೊಡಿಸಿದ್ದಾರೆ ಆ ಎಲ್ಲಾ ದಾಖಲಾತಿಗಳು ಅವರ ಬಳಿ ಇವೆ ಎಂದರೆ ಸಾಕ್ಷಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ.

ನೀವು ಮನಸ್ಸು ಮಾಡಿದ್ದರೆ ಪುನೀತ್ ರವರು ಕುಡಿಯುವುದನ್ನು ತಪ್ಪಿಸಬಹುದಿತ್ತು ಎಂದರೆ ಸಾಕ್ಷಿ ಅಪರೂಪಕ್ಕೊಮ್ಮೆ ಸ್ನೇಹಿತರ ಜೊತೆ ಕುಡಿಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಪುನೀತ್ ರವರ ಕುಟುಂಬದ ಆಸ್ತಿಯ ಮೇಲೆ ನಿಮಗೆ ಹೆಚ್ಚು ಆಸಕ್ತಿ ಇದುದ್ದರಿಂದ ನೀವು ಪುನೀತ್ ರವರ ಆರೋಗ್ಯದ ಬಗ್ಗೆ ಕಾಳಜಿ ಮಾಡಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನೀತ್ ರವರ ಅನಾರೋಗ್ಯದ ಅವದಿಯಲ್ಲಿ ನೀವು ಕೆ.ಎಂ.ದೊಡ್ಡಿ ಜಿ.ಮಾದೇಗೌಡ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದುದ್ದಾಗಿ ಹೇಳಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎಂದಾದರೂ ನಿಮ್ಮ ಗಂಡನನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಿ ತೋರಿಸಿದ್ದೀರಾ ಎಂದರೆ ಸಾಕ್ಷಿ ಆ ಆಸ್ಪತ್ರೆ ಆಗಷ್ಟೇ ಪ್ರಾರಂಭವಾಗಿತ್ತು ಅಲ್ಲಿ ಲಿವರ್ ಖಾಯಿಲೆಗೆ ಸಂಬಂಧಪಟ್ಟ ವೈದ್ಯರು ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡನಿಗೆ ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಕರೆದುಕೊಂಡು ಹೋದರೆ ನಿಮ್ಮ ನಡವಳಿಕೆಯ ಬಗ್ಗೆ ಮತ್ತು ನಿಮ್ಮ ಚಾರಿತ್ರ್ಯದ ಬಗ್ಗೆ ಪುನೀತ್ ರವರಿಗೆ ಮತ್ತು ಅವರ ಕುಟುಂಬಸ್ಥರಿಗೆ ಗೊತ್ತಾಗುತ್ತದೆ ಎಂದು ಒಂದು ಸಾರಿಯೂ ಅಲ್ಲಿಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸಾಕ್ಷಿ ನನ್ನ ಚಾರಿತ್ರ್ಯದ ಬಗ್ಗೆ ಯಾರು ಏನು ಮಾತಾಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರು ಸಾಯುವ ಹಂತದಲ್ಲಿ ಇದ್ದಾಗಲೂ ನೀವು ಅದ್ದೂರಿಯಾಗಿ ನಿಮ್ಮ ಹುಟ್ಟು ಹಬ್ಬವನ್ನು ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನಿಮ್ಮ ಯಜಮಾನವರು ತೀರಿಕೊಂಡ 3 ರಿಂದ 3 ವರೆ ತಿಂಗಳಲ್ಲಿ ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವಾರ್ಷಿಕೋತ್ಸವ ಆಯಿತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ

ಕಾರ್ಯಕ್ರಮದಲ್ಲಿ ನೀವು ನಿಮ್ಮ ಆಸ್ಪತ್ರೆಯ ಸಿಬ್ಬಂದಿಗಳ ಜೊತೆ ನೃತ್ಯ ಮಾಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಮೂರು ಫೋಟೋ ತೋರಿಸಿ ಸದರಿ ಫೋಟೋದಲ್ಲಿ ಮಧ್ಯದಲ್ಲಿ ಕಾಣುವ ವ್ಯಕ್ತಿ ನೀವೇ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಈ ಫೋಟೋ ಪುನೀತ್ ರವರು ತೀರಿಕೊಂಡ 2–3 ತಿಂಗಳಲ್ಲಿ ಆದ ಕಾರ್ಯಕ್ರಮದ ಫೋಟೋ ಅಲ್ಲ, ಒಂದು ವರ್ಷಕ್ಕೂ ಮೇಲಾಗಿತ್ತು ಎಂದು ಉತ್ತರಿಸುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಒಪ್ಪಿರುವ ಕಾರಣ ಫೋಟೋಗಳನ್ನು ನಿಡಿ.1 ರಿಂದ ನಿಡಿ.3 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ಆಗಿರುವ ಕಾರ್ಯಕ್ರಮ 2019 ನೇ ಇಸವಿಯಲ್ಲಿ ನಡೆದಿರುವುದು ಹಿಂಬದಿ ಬ್ಯಾನರ್ ನಲ್ಲಿ ಕಾಣುತ್ತಿದೆ ಎಂದರೆ ಸಾಕ್ಷಿ ಬ್ಯಾನರ್ ಅಲ್ಲಿ ಇಸವಿ ತಪ್ಪಾಗಿದೆ ನರ್ಸಿಂಗ್ ಡೇ ಸಮಯದ ಬ್ಯಾನರ್ ಅನ್ನು ಹಾಕಲಾಗಿದೆ ಬೇಕಾದರೆ ಆಸ್ಪತ್ರೆಯಿಂದ ಸರಿಯಾದ ದಿನಾಂಕದ ಬಗ್ಗೆ ದಾಖಲಾತಿ ಪಡೆದು ಹಾಜರು ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.